<u>**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**</u>

<u>**ಹಿರೇಕೆರೂರು.**</u>

<u>**ಸಿ.ಸಿ.ನಂಬರ್‌ಃ200/2020**</u>

ಸಿಡಬ್ಲ್ಯೂಃ2

ಪಿಡಬ್ಲ್ಯೂಃ2

| | | |
|---|---|---|
| ಸಾಕ್ಷಿಯ ಹೆಸರು | : | ರಾಮಪ್ಪ ಮೂಡಿ |
| ತಂದೆಯ ಹೆಸರು | : | ಗೋಪಾಲಪ್ಪ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಬಾವಾಪುರ |

ಇಂದು ದಿನಾಂಕಃ31.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

<u>**ಮುಖ್ಯ ವಿಚಾರಣೆಃ**</u> ಮಾನ್ಯ ಎಪಿಪಿಯವರಿಂದಃ

ಸಾಕ್ಷಿಗೆ ಕಡತದಲ್ಲಿರುವ ಮಹಜರ ದಾಖಲೆಯನ್ನು ತೋರಿಸಲಾಗಿದ್ದು ಅದರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಚಾಸಾ-1 ರವರ ಹೊಲದಲ್ಲಿ ದಿನಾಂಕ 08-07-2019 ರಂದು ಮಾಡಿರುತ್ತೇನೆ. ಆ ದಿನದಂದು ಪೋಲಿಸರು ಕೃತ್ಯ ಸ್ಥಳಕ್ಕೆ ಬೇಟಿ ನೀಡಿದ್ದು ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪೋಲಿಸರು ಮಹಜರನ್ನು ಮಾಡಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ.

<u>**ಪಾಟೀ ಸವಾಲುಃ**</u> ಆರೋಪಿ ಪರ ಶ್ರೀ ಆರ್ ಬಿ ಕೆ ವಕೀಲರಿಂದಃ

ಚಾಸಾ-1 ರವರು ನನಗೆ ಸಂಬಂದಿಕರು ಆಗಿರುವುದಿಲ್ಲ. ಘಟನಾ ಸ್ಥಳದ ಸರ್ವೆನಂಬರು ನನಗೆ ಹೇಳಲು ಆಗುವುದಿಲ್ಲ. ಗಲಾಟೆ ಮಾಡಿದ ನಿಖರವಾದ ಸ್ಥಳ ನನಗೆ ಗೊತ್ತಿರುವುದಿಲ್ಲ. ಕೃತ್ಯ ಸ್ಥಳದ ಚಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ಪೋಲಿಸರು ನನ್ನ ಸಮಕ್ಷಮದಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಹಾಗೂ ನಿಪಿ-2 ಕ್ಕೆ ನಾನು ಠಾಣೆಯಲ್ಲಿಯೇ ಸಹಿ ಮಾಡಿರುತೆತೇನೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರಿಂದ 6 ನಾವು ಎಲ್ಲಾ ಸಂಬಂದಿಕರಾಗಿದ್ದು ಚಾಸಾ-1 ರವರು ಸಲ್ಲಿಸಿದ್ದ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.

**ಸಿವಿಲ್ ನ್ಯಾಯಾಧೀಶರು  ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**

**ಹಿರೇಕೆರೂರು.**

**ಸಿ.ಸಿ.ನಂಬರ್ಃ200/2020**

ಸಿಡಬ್ಲ್ಯೂಃ3

ಪಿಡಬ್ಲ್ಯೂಃ3

| | | |
|---|---|---|
| ಸಾಕ್ಷಿಯ ಹೆಸರು | : | ಈರಪ್ಪ ಮೂಡಿ |
| ತಂದೆಯ ಹೆಸರು | : | ಹನುಮಂತಪ್ಪ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಬಾವಾಪುರ |

ಇಂದು ದಿನಾಂಕಃ31.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

ಸಾಕ್ಷಿಗೆ ಕಡತದಲ್ಲಿರುವ ಮಹಜರ ದಾಖಲೆಯನ್ನು ತೋರಿಸಲಾಗಿದ್ದು ಅದರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–2 ಎಂದು ಗುರತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಚಾಸಾ–1 ರವರ ಹೊಲದಲ್ಲಿ ದಿನಾಂಕ 08–07–2019 ರಂದು ಮಾಡಿರುತ್ತೇನೆ. ಆ ದಿನದಂದು ಪೋಲಿಸರು ಕೃತ್ಯ ಸ್ಥಳಕ್ಕೆ ಬೇಟಿ ನೀಡಿದ್ದು ಚಾಸಾ–1 ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ–2 ರವರ ಸಮಕ್ಷಮದಲ್ಲಿ ಪೋಲಿಸರು ಮಹಜರನ್ನು ಮಾಡಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಆರ್ ಬಿ ಕೆ  ವಕೀಲರಿಂದಃ

ಚಾಸಾ–2 ರವರು ನನಗೆ ಅಣ್ಣ ತಮ್ಮಂದಿರು ಆಗಬೇಕು. ಚಾಸಾ–1, 4 ರಿಂದ 6 ರವರು ರವರು ನನಗೆ ಸಂಬಂದಿಕರು ಆಗಿರುವುದಿಲ್ಲ. ಘಟನಾ ಸ್ಥಳ ಜಮೀನು ಆಗಿರುತ್ತದೆ. ಅದರ ಸರ್ವೆನಂಬರು 11 ಆಗಿರುತ್ತದೆ. ಕೃತ್ಯ ಸ್ಥಳದ ಚಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ಪೋಲಿಸರು ನನ್ನ ಸಮಕ್ಷಮದಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಹಾಗೂ ನಿಪಿ–2 ಕ್ಕೆ ನಾನು ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ–1 ರವರಿಗೆ ಸಹಾಯ ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆನಂ.11 ಎಷ್ಟು ಎಕರೆ ಜಮೀನು ಇದೆ ಎಂದು ನನಗೆ ಹೇಳಲು ಆಗುವುದಿಲ್ಲ. ಚಾಸಾ–1 ರಿಂದ 6 ನಾವು ಎಲ್ಲಾ ಸಂಬಂದಿಕರಾಗಿದ್ದು ಚಾಸಾ–1 ರವರು ಸಲ್ಲಿಸಿದ್ದ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.